ಶ್ರೀ ಜೆ. ನಾರಾಯಣಪ್ಪ.—ಪಂಚಾಯ್ತಿಗಳು ಮತ್ತು ನೂರಾರು ಜನರು ಅರ್ಜಿ ಕೊಟ್ಟಿದ್ದಾರೆ. ಕೊತ್ತಪೇಟೆಕ್ಕೆ ಕುಪ್ಪಂ ಮತ್ತು ಕೋಲಾರದ ಸಂಪರ್ಕ ಜಾಸ್ತಿ ಇದೆ. ಕೇವಲ 11–12 ಮೈಲಿ. ಇದನ್ನು ಪರಿಶೀಲನೆ ಮಾಡಿ ಮಂಜೂರು ಮಾಡಿಸಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರ ಬಗ್ಗೆ ಅವರು ನೂಕ್ತ ರೀತಿಯಲ್ಲಿ ಕಾರ್ಯ ಕ್ರಮವನ್ನು ತೆಗೆದುಕೊಂಡರೆ ಸರ್ಕಾರ–ನಮ್ಮ ಕಡೆಯಿಂದ ಯಾವ ಅಡ್ಡಿ ಬರಲಿಕ್ಕೆ ಇಚ್ಛೆ ಇಲ್ಲ. ಇದರ ಬಗ್ಗೆ ಕಾನೂನು ಪ್ರಕಾರ ಸಂಬಂಧಪಟ್ಟವರು ನೂಕ್ತ ಕಾರ್ಯಕ್ರಮ ತೆಗೆದುಕೊಂಡರೆ ಮುಂದೆ ಏನು ಅನುಕೂಲವಾಗಬಹುದೋ ಅಷ್ಟು ಮಾಡಲಿಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಜೆ. ನಾರಾಯಣಪ್ಪ.—ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೀರಾ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆಲ್ಲಾ ಸೂಚನೆ ಕೊಡುವುದಕ್ಕಾಗುದಿಲ್ಲ. ಸಂಬಂಧಪಟ್ಟವರು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ನಮ್ಮ ಸರ್ಕಾರದಿಂದ ಇಂಥ ಸಹಾಯ ಆಗಬೇಕೆಂದರೆ ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೆವೆ.

COMPENSATION TO BE PAID TO THE RYOTS WHOSE LANDS ARE SUBMERGED DUE TO WATER SPREAD OF THONNUR TANK IN PANDAVAPURA TALUK.

* .*Q*—59. Sri B. CHAMIAH (Pandavapura).—

Will the Government be pleased to state.—

(*a*) the extent of lands that have come under submersion due to the water spread of Thonnur Tank in Pandavapura taluk ;

(*b*) the number of ryots affected thereby and from what time ;

(*c*) whether compensation has been paid to the ryots who have lost lands due to the submersion ;

(*d*) whether the Government have not assured on the floor of the Assembly that arrangements would be made to pay the compensation early ?

A.—Sri M. N. NAGHNOOR (Deputy Minister for Public Works).—

(*a*) 109 acres in years of normal rainfall. About 173 acres in years of abnormal rainfall.

(*b*) About 50 families since the year 1948.

(*c*) No.

(*d*) The matter is being expedited.

ಶ್ರೀ ಬಿ. ಚಾಮಯ್ಯ.—1948 ರಿಂದ ಮುಳುಗಡೆಯಲ್ಲದೆಯೆಂದು ಉತ್ತರಕೊಟ್ಟಿದ್ದೀರಿ. ಆಲಾಗಾಯಿತು ಕಾಂಪೆನ್ಸೇಷನ್ ಕೊಡದೆ ನಿಧಾನಮಾಡಿರುವುದಕ್ಕೆ ಕಾರಣವೇನು ?

†ಶ್ರೀ ಎಂ. ಎನ್. ನಾಗನೂರ್.—ನಿಧಾನವಾಗಿರುವುದು ನಿಜ. ಮೊನ್ನೆತಾನೆ ಡೆಪ್ಯುಟಿ ಕಮಿಷನರು ವರದಿಮಾಡಿದ್ದಾರೆ. ರಿಕಾರ್ಡ್‌ಗಳನ್ನು ಬೇಗ ಪೂರ್ತಿ ಮಾಡುವುದಾಗಿ ಹೇಳಿದ್ದಾರೆ. ನಿರ್ದಿಷ್ಟವಾಗಿ Submergeable area ಎಷ್ಟು ಎಂಬುದನ್ನು ನಿರ್ಧಾರ ಮಾಡಬೇಕಾಗಿದೆ. ಇದರಿಂದಾಗಿ ಸ್ವಲ್ಪ ಕಾಲವಿಳಂಬವಾಗಿದೆ. ಆದಷ್ಟು ಬೇಗನೆ ಮಾಡಬೇಕೆಂದು ಡೆಪ್ಯುಟಿ ಕಮಿಷನರಿಗೆ ಹೇಳಿದ್ದೇವೆ.

ಶ್ರೀ ಬಿ. ಚಾಮಯ್ಯ.—ಆದರೂ ಇದಕ್ಕೆ 13 ವರ್ಷ ಬೇಕೆ ?

† ಶ್ರೀ ಎಚ್. ಕೆ. ವೀರಣ್ಣಗೌಡ.—1948 ನೆಯ ಇಸವಿಯಿಂದ ಸಬ್‌ಮರ್ಜ್ ಆಗಿರುವುದರಲ್ಲಿ ಯಾವುದು ಹಿಡುವಳಿಯಲ್ಲತ್ತು, ಯಾವುದು ಒತ್ತುವರಿಯಾಗಿತ್ತು, ಎಂಬುದನ್ನು ನಿರ್ಧಾರ ಮಾಡಬೇಕಾಗಿದೆ. ಇದಕ್ಕೆ ಸರ್ವೆ ಮಾಡಬೇಕಾಗುತ್ತದೆ. ಅಂದರೆ, ಬೇರೆ ಇಲಾಖೆಗೆ ಹೋಗಬೇಕಾಗುತ್ತದೆ. ಆದ್ದರಿಂದ ಅದಷ್ಟು ಬೇಗನೆ ಮಾಡಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈಗಿರತಕ್ಕ 50 ಕುಟುಂಬಗಳ ಹೈಕಿ ಪೂರ ಅವರಲ್ಲಿರುವ ಹಿಡುವಳಿಯೆಲ್ಲವೂ ಆಕ್ಸೈರ್ ಆಗಿರತಕ್ಕವರೆಷ್ಟು ?

ಶ್ರೀ ಎಚ್. ಕೆ. ವೀರಣ್ಣಗೌಡ.—50 ಕುಟುಂಬ ಎಂಬುದೇ ನಿರ್ಧಾರವಾಗಿಲ್ಲ. ಎಷ್ಟು ಎಕರೆ ಮುಳುಗಡೆಯಾಗುತ್ತದೆಂದು ಗೊತ್ತಾದಮೇಲೆ, ಎಷ್ಟು ಕುಟುಂಬ ಎಂದು ಗೊತ್ತಾಗುತ್ತದೆ. ಇವರಿಗಿರುವುದರಲ್ಲಿ ಹಿಡುವಳಿ ಎಷ್ಟು ಒತ್ತುವರಿ ಎಷ್ಟು ಎಂಬುದನ್ನು ನೋಡಬೇಕು.

ಶ್ರೀ ಜಿ. ಎಸ್. ಬೊಮ್ಮೇಗೌಡ.—13 ವರ್ಷಗಳಕಾಲ ಹೀಗೆ ಅಕ್ವೈಸಿಷನ್ ಪೂರ್ತಿ ಮಾಡದೆ ಇದ್ದರೆ, ಇದಿಷ್ಟು ಕಾಲಕ್ಕೂ ಆಗುವ ಫಸಲು ನಷ್ಟ ಮುಂತಾದುವನ್ನು ಸೇರಿಸಿಕೊಂಡು ದುಬಾರಿಯಾಗಿ ಅಕ್ವೈಸಿಷನ್ ಮೊಬಲಗು ಕೊಡಬೇಕಾಗುತ್ತದಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ದುಬಾರಿಯೆಂಬುದರ ಪ್ರಶ್ನೆಯೇ ಈಗ ಬರುವುದಿಲ್ಲ. ಹಿಡುವಳಿ ಎಷ್ಟು, ಒತ್ತುವರಿ ಎಷ್ಟು, ಎಂಬುದೆಲ್ಲಾ ತೀರ್ಮಾನವಾದಮೇಲೆ ಅಕ್ವೈಸಿಷನ್ ಕ್ರಮ ಬರುತ್ತದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—10-12 ವರ್ಷ ಫಸಲು ನಷ್ಟ ಕೊಡುವುದು ಸರಿಯಾದ ಕ್ರಮವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪ್ರಶ್ನೆ ತೀರ್ಮಾನವಾದಮೇಲೆ, ಸರ್ಕಾರದವರು ಫಸಲು ನಷ್ಟಕ್ಕೂ ಕಾಂಪೆನ್‌ಸೇಷನ್ ನ್ಯಾಯವಾಗಿ ಕೊಡಬೇಕಾಗಿದ್ದರೆ ಕೊಡುತ್ತೇವೆ, ಹಿಂಜರಿಯುವುದಿಲ್ಲ. ಕಾನೂನು ಪ್ರಕಾರ ಏನೇನು ಕೊಡಬೇಕೋ ಕೊಡುತ್ತೇವೆ.

Dr. R. NAGAN GOWDA.—May I know whether the prices that are prevailing will be paid for these lands or whether the prices prevailing in 1948 will be paid while acquiring them ?

Sri H. K. VEERANNA GOWDH.—That question will be considered when the award is made.

ಶ್ರೀ ಕೆ. ವಿ. ಬೈರೇಗೌಡ.—ಈ ಕೆರೆಯ ಒಳಾಯದಲ್ಲಿ ಸಬ್‌ಮರ್ಜ್ ಆಗಿರುವ ಎಕರೆ ಎಷ್ಟು ?

ಶ್ರೀ ಎಚ್. ಕೆ. ವೀರಣ್ಣಗೌಡ.—82 ಎಕರೆ ಎಂದು ಇಲ್ಲೇ ಹೇಳಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—82 ಎಕರೆಗಳ ಬಗ್ಗೆ ಅಕ್ವೈಸಿಷನ್ ಮಾಡುವುದಕ್ಕೆ ಇಷ್ಟು ನಿಧಾನವಾದರೆ, ಆ ಜನರು ಜೀವನ ಹೇಗೆ ಮಾಡುತ್ತಾರೆಂಬುದನ್ನೂ ಸರ್ಕಾರದವರೇನಾದರೂ ಯೋಚನೆ ಮಾಡಿದ್ದಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಪರೀಗ ಜೀವನ ಮಾಡುತ್ತಿದ್ದಾರೆ. ಅದರಿಂದರೇ ಗೊತ್ತಾಗುತ್ತದೆ, ಜೀವನ ಅವರು ನಡೆಸಬಲ್ಲರು ಎಂಬುದು.

ಶ್ರೀ ಬಿ. ಚಾಮೇಗೌಡ.—ಈ 173 ಎಕರೆ ಜಮೀನುಗಳನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾವು ತೆಗೆದುಕೊಳ್ಳಲ, ತೆಗೆದುಕೊಳ್ಳದಿರಲ, ಜಮೀನು ಮುಳುಗಳೆಯಾಗಿದೆ.

ಶ್ರೀ ಬಿ. ಚಾಮೇಗೌಡ.—ಈ ಅಕ್ವೈಸಿಷನ್ ಕ್ರಮ ಮುಗಿಯಲು ಎಷ್ಟುಕಾಲ ಬೇಕಾಗುತ್ತದೆ ?

ಶ್ರೀ ಎಚ್. ಕೆ. ವೀರಣ್ಣಗಾಡ.—ಕಾಲ ಎಷ್ಟೆಂದು ಹೇಳುವುದೇನಿದ್ದರೂ ಉಹೆಯ ಮಾತು ಅಷ್ಟೆ.

Sri U. M. MADAPPA.—May I know why the Government has failed to take action to acquire the land and pass the award before these lands were submerged ?

ಶ್ರೀ ಎಚ್. ಕೆ. ವೀರಣ್ಣಗಾಡ.—ಕೆಲವು ಸಂದರ್ಭಗಳಲ್ಲಿ ಹಾಗಾಗುತ್ತದೆ.

Sri Y. VEERAPPA.—Is it not illegal to take possession of lands belonging to others before acquiring them ?

ಅಧ್ಯಕ್ಷರು.—ಅದು 'ಲಾ' ಪಾಯಿಂಟ್ ಆಯಿತು. ಅವಂಗೊಂದು ಲಾಯರ್ ನೋಟೀಸ್ ಕೊಡಿಸಿ.

ಶ್ರೀ ಎಚ್. ಕೆ. ವೀರಣ್ಣಗಾಡ.—ನೀವು ಕೇಳುವ ಪ್ರಶ್ನೆ Hypothetical ಆಗಿದೆ. ಹಿದುವಳಿ ಎಷ್ಟು, ಒತ್ತುವರಿಯಷ್ಟು, ಎಂಬುದು ನಿಗದಿಯಾದ ಮೇಲೆ ಬಿಡ್ಡಿ, ಮತ್ತೊಂದು, ಮಗದೊಂದು ಎಲ್ಲಾ ಬರುತ್ತದೆ.

ಶ್ರೀ ಬಿ. ಚಾವೇಗಾಡ.—ಈ 50 ಸಂಸಾರಗಳು ಬೇರೆ ಕಡೆ ಜಮೀನು ಕೊಡಿ ಎಂದು ಕೇಳಿದ್ದಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗಾಡ.—ಅದಕ್ಕೆ ನೋಟಿಸ್ ಬೇಕು.

CONCRETING OF CHIKMAGALUR MANGALORE ROAD.

*Q.—74 Sri A. M. BASAVE GOWDA (Chikmagalur).—

Will the Government be pleased to state.—

(*a*) whether they are aware that large quantity of Iron and Manganese Ore is being carried by heavy trucks on Hosadurga, Banavar-Sakrepatna-Mudigere-Mangalore road and as a result the Chikmagalur, Mangalore road has been damaged very much ;

(*b*) whether they intend to include this road as National Highway to think of concreting it ?

A.—Sri M. N. NAGHNOOR (Deputy Minister for Public Works).—

(*a*) Yes. Heavy Ore movement is reported on Huliyar-Banavar-Kadur-Chikmagalur-Mudigere-Mangalore road. Ore traffic from Hosadurga is not reported to come to Banavar but it moves to Mangalore *via* Ajjampur-Birur-Kadur and Chikmagalur. The road Chikmagalur to Mangalore is reported to be damaged at places.

(*b*) There is no such intention at present.